serious allegation. ಆದ್ದರಿಂದ ನಾನು ಪುನಃ ತಮ್ಮಲ್ಲಿ ಮನವಿ ಮಾಡಿಕೊಳ್ಳುವುದು ಏನೆಂದರೆ It is the question of giving some concession. Even if the House desires to refer it to the Public Accounts Committee, Government would like to consider that aspect. If it is found that there is some *malafide* intention, we will look into it and if found necessary will refer this to the Public Accounts Committee because we are not in an hurry to get it passed.

ಶ್ರೀ ಎಸ್. ಆರ್. ಬೊಮ್ಮಾಯಿ.—ನಾನು ಈ ಚರ್ಚೆಯಲ್ಲಿ ಭಾಗವಹಿಸುವುದಕ್ಕೆ ಅವಕಾಶವಿಲ್ಲ ಎಂದು ನಾನು ಕುಳಿತುಕೊಂಡಿದ್ದೆ. ಮಾನ್ಯ ಅರ್ಥ ಮಂತ್ರಿಗಳ ಕಷ್ಟವನ್ನು ನಾನು ಅರಿತುಕೊಂಡಿದ್ದೇನೆ ಅದು ಅರ್ಥಮಂತ್ರಿಗಳಿಗೂ ಅರ್ಥವಾಗಿದೆ. ನಮಗೂ ಅರ್ಥವಾಗಿದೆ. ಈ ಬಿಲ್ಲು ಏನಿದೆ ಇದು ಹಿಂದೆ ಇದ್ದಂತಹವರು ತಯಾರು ಮಾಡಿದ್ದು. ಆ ಬಿಲ್ಲನ್ನೇ ಇವೊತ್ತಿನ ದಿವಸ ತಂದಿದ್ದಾರೆ, ಇದರ ಹಿನ್ನೆಲೆಯನ್ನು ಸಂಪೂರ್ಣವಾಗಿ ತಿಳಿದುಕೊಳ್ಳುವುದಕ್ಕೆ ಆಗಿಲ್ಲ. ಇದನ್ನು ಏತಕ್ಕೆ ತಂದರು ಇದರ ಇಂಪ್ಲಿಕೇಷನ್ ಏನು ಎಂಬುದನ್ನು ತಿಳಿದುಕೊಳ್ಳುವುದು ಸ್ವಲ್ಪ ಕಷ್ಟ. ಇದರಲ್ಲಿ ರಾಜಕೀಯ ಉದ್ದೇಶ ಇದೆಯೋ ಇಲ್ಲವೋ ಗೊತ್ತಿಲ್ಲ. ಸರ್ಕಾರದ ಬೊಕ್ಕಸಕ್ಕೆ ಬರತಕ್ಕ ಹಣವನ್ನು ಸೂಕ್ತವೋ ಅಲ್ಲವೋ ಎಂಬುದನ್ನು ಆಲೋಚನೆ ಮಾಡಬೇಕು. ಅಥವಾ ಒಂದು ಕಾಲಕ್ಕೆ ಅದು ಸೂಕ್ತವಾಗಬಹುದು. ಯಾವುದೇ ಒಂದು ಪರಿಹಾರವನ್ನು ಕೊಡಂವುದು ಒಂದು ಸದುದ್ದೇಶದಿಂದ. ಅಲ್ಲದೆ ಕೆಲವೊಂದು ವ್ಯಕ್ತಿಗಳಿಗೆ ಲಾಭ ಮಾಡುವ ದೃಷ್ಟಿಯಿಂದ ಸರ್ಕಾರದ ಬೊಕ್ಕಸಕ್ಕೆ ಬರತಕ್ಕ ಹಣ ಬರದಿದ್ದರೆ ಇದರ ಬಗ್ಗೆ ಆಲೋಚನೆ ಮಾಡುತ್ತೇನೆ ಎಂದು ಮಾನ್ಯ ಅರ್ಥ ಮಂತ್ರಿಗಳು ಹೇಳಿದ್ದಾರೆ. ಅದನ್ನು ನಾನು ಸ್ವಾಗತ ಮಾಡುತ್ತೇನೆ.

MR. SPEAKER.—On some other day, we will take up this Bill. Now the Hon'ble Minister for Revenue and Agriculture may please move the Bill.

SRI S. BANGARAPPA (Minister for Revenue and Agriculture).—I beg to move that the Mysore Religious and Charitable Institutions (Karnataka Amendment) Bill, 1979, be taken into consideration.

The question was proposed

೫-೩೦ ಪಿ.ಎಂ.

† ಶ್ರೀ ಎಸ್. ಬಂಗಾರಪ್ಪ (ಮಾನ್ಯ ಕಂದಾಯ ಸಚಿವರು).—ಮಾನ್ಯ ಅಧ್ಯಕ್ಷರೇ, ಇದು ಒಂದು ಸಣ್ಣ ತಿದ್ದುಪಡಿ. ಮೈಸೂರು ರಿಲಿಜಿಯಸ್ ಮತ್ತು ಚಾರಿಟಿಬಲ್ ಎಂಡೋಮೆಂಟ್ ೧೯೨೭. ಇದು ಹಳೆಯ ಮೈಸೂರು ರಾಜ್ಯಕ್ಕೆ ಸಂಬಂಧಪಟ್ಟದ್ದು ಇದು ೧೯೨೭ ರಲ್ಲಿ ಪಾಸ್ ಆಗಿರತಕ್ಕಂಥಾದ್ದು. ಈ ಆಕ್ಟಿನಲ್ಲಿ ಒಂದು ಕಾಲಂ ಇರಲಿಲ್ಲವೆಂದು ಹೈಕೋರ್ಟಿನವರು ಗೌರ್ನಮೆಂಟ್ ಆಕ್ಷನ್ ವಿರುದ್ಧವಾಗಿ ಒಂದು ತೀರ್ಪುಕೊಟ್ಟರು. ನಾವು ಆ ತೀರ್ಪನ್ನು ನೋಡಿದಮೇಲೆ ಅದಕ್ಕೆ ಕಾಂಪ್ರಮೈಸ್ ಮತ್ತು ರಿಸರ್ವ್ ಫಂಡ್ " ಆನ್ಯೂಯಲ್ ರಿಪೇರ್ಸ್ ಗಳಿಗೆ ಮತ್ತು ಅದರ ಪುರೋಬಿವೃದ್ಧಿ " ಗಾಗಿ ಖರ್ಚು ಮಾಡುತ್ತಾ ಬಂದಿದ್ದಾರೆ. ಹಳೆಯ ಮೈಸೂರು ರಾಜ್ಯದಲ್ಲಿ ಈ ಕಾನೂನು ತಂದಿರತಕ್ಕಂಥಾದ್ದು. ಇದು ಹಳೆಯ ಮೈಸೂರು ಚಾರಿಟಬಲ್ ಅಂಡ್ ಎಂಡೋಮೆಂಟ್ಸ್ ಇನ್ಸ್‌ಟ್ಯೂಷನ್ ೧೯೨೭ರಲ್ಲಿ ಒಂದು ಸೆಕ್ಷನ್ ಸೇರಿಸಬೇಕಾಗಿದೆ. ವಿಷಯ ಏನು ಎಂದರೆ ಆನ್ಯೂಯಲ್ ಇನ್‌ಕಂ ನಲ್ಲಿ ಸಣ್ಣಪ್ರಟ್ಟ ದೇವಸ್ಥಾನಗಳಲ್ಲಿ ಬರುವ ಉತ್ಪನ್ನದಿಂದ ಅದರ ಖರ್ಚುವೆಚ್ಚಗಳನ್ನು ತೂಗಿಸಿಕೊಂಡು ಬರಬೇಕಾಗುತ್ತದೆ. ಇವು ಸಣ್ಣ ಇನ್ಸ್‌ಟ್ಯೂಷನ್‌ಗಳಾಗಿರುವುದರಿಂದ ಆವಕ್ಕೆ ೫ ಪರ್ಸೆಂಟಿನಿಂದ ೧೫ ಪರ್ಸೆಂಟ್‌ವರೆಗೆ ರಿಸರ್ವ್ ಫಂಡಿ ಗೋಸ್ಕರ ಹಣವನ್ನು ಕಲೆಕ್ಟ್ ಮಾಡಿದೆ. ಹಳೆಯ ಮೈಸೂರು ರಾಜ್ಯದಲ್ಲಿ ಮಾತ್ರ. ಇದರ ಬಗ್ಗೆ ಶಿವಮೊಗ್ಗ ಜಿಲ್ಲೆಯವರು ಹೈಕೋರ್ಟಿನಲ್ಲಿ ರಿಟ್ ಹಾಕಿದರು. ಆದರಲ್ಲಿ ೧೯೨೭ ರ ಆಕ್ಟಿನಲ್ಲಿ

ರಿಸರ್ವ್ ಆಥವಾ ಕಾಂಟ್ರಿಬ್ಯೂಷನ್ ಕಲೆಕ್ಷನ್ ಮಾಡಲಿಕ್ಕೆ ಒಂದು ಕಾಲಂ ಇಲ್ಲವೆಂದು ಇಲ್ಲಿಯವರೆಗೂ ವಸೂಲಿ ಮಾಡಿರುವುದು ಸರಿಯಲ್ಲವೆಂದು ಮತ್ತು ಅದನ್ನು ವಾಪಸ್ ಕೊಡಬೇಕೆಂದು ಕೋರ್ಟು ತೀರ್ಮಾನ ಕೊಟ್ಟಿದ್ದರಿಂದ ಈ ತೀರ್ಪಿನ ಪ್ರಕಾರ ರಿಸರ್ವ್ ಫುಂಡ್ ಆಗಲಿ ಕಾಂಟ್ರಿಬ್ಯೂಷನ್ ಆಗಲಿ ಇಲ್ಲದೆ ಹೋದರೆ ಈ ದೇವಸ್ಥಾನಗಳನ್ನು ಮೇಯಿಂಟೇನ್ ಮಾಡಲಿಕ್ಕೆ ಸಾಧ್ಯವಾಗುವುದಿಲ್ಲ. ಅನಿರೀಕ್ಷಿತವಾಗಿ ಯಾವುದೇ ಖರ್ಚುಗಳು ಬಂದರೂ ಅದನ್ನು ಸರಿತೂಗಿಸುವುದಕ್ಕೆ ತೊಂದರೆಯಾಗುತ್ತದೆಂದು ಜೊತೆಗೆ ಇಲ್ಲಿಯವರೆಗೆ ವಸೂಲಿ ಮಾಡಿರತಕ್ಕಂಥಾದ್ದನ್ನು ವಾಪಸ್ ಕೊಡಬೇಕೆಂದು ತೀರ್ಪುಕೊಟ್ಟಿರುವುದರಿಂದ ಸೆಕ್ಷನ್ ೧೨ ರಲ್ಲಿ ಒಂದು ಸಣ್ಣ ಬದಲಾವಣೆ ಮಾಡಬೇಕಾಗಿದೆ. ಇದು ಏನಾಗಿದೆ ಎಂದರೆ ಅನೇಕ ದಿವಸಗಳಿಂದ ಕಲೆಕ್ಟ್ ಮಾಡುತ್ತಾ ಬಂದಿದ್ದಾರೆ ಅವರು ಕೊಡುತ್ತಾ ಬಂದಿದ್ದಾರೆ.

ಶ್ರೀ ಎಚ್. ಡಿ. ದೇವೇಗೌಡ (ಹೊಳೆನರಸೀಪುರ).—ಕಲೆಕ್ಟ್ ಮಾಡಿದ್ದು ಸರಿ ಎಂದು ಸಭೆ ಕೊಟ್ಟಂಥ ತೀರ್ಮಾನವನ್ನು ಈಗ ಒಂದೇ ಬಾಣದಿಂದ ಸರಿಮಾಡಲಿಕ್ಕೆ ಹೊರಟಿದ್ದೀರಿ?

ಶ್ರೀ ಎಸ್. ಬಂಗಾರಪ್ಪ.—ಈ ಬಿಲ್ಲಿನಿಂದ ಸರಿಮಾಡಬೇಕೆಂದು ಹೊರಟಿರುವುದು. ನಾನು ಈಗಾಗಲೇ ಹೇಳಿದಹಾಗೆ ಕಾಂಟ್ರಿಬ್ಯೂಷನ್‌ನ್ನು ರಿಸರ್ವ್ ಫುಂಡಿಗೆ ತೆಗೆದುಕೊಂಡಿದ್ದಾರೆ ಅದನ್ನು ವಾಪಸ್ ಈ ಮೈನರ್ ಇನ್‌ಸ್ಟ್ರೂಷನ್ ಕೊಟ್ಟರೆ ಅವುಗಳನ್ನು ಮುಚ್ಚಬೇಕಾಗುತ್ತದೆ. ಈಗ ಇರುವ ಆಕ್ಟಿನಲ್ಲಿ ಕಲೆಕ್ಟ್ ಮಾಡುವುದಕ್ಕೆ ಅಧಿಕಾರವಿಲ್ಲ ಮತ್ತೆ ಕಲೆಕ್ಟ್‌ಮಾಡಿರುವುದನ್ನು ವಾಪಸ್ ಕೊಡಬೇಕೆಂದು ತೀರ್ಪನ್ನು ಕೊಟ್ಟಿದ್ದಾರೆ. ಆದ್ದರಿಂದ ಅದನ್ನು ಬದಲಾವಣೆಮಾಡಿ ಸೆಕ್ಷನ್ ೧೨ ಕ್ಕೆ ಒಂದು ಸಣ್ಣ ತಿದ್ದುಪಡಿ ಮಾಡಿ ಸೆಕ್ಷನ್ ೧೨ (೨) ಎಂದು ಮಾಡಿದ್ದೇವೆ. ಆದ್ದರಿಂದ ಮಾನ್ಯ ಅಧ್ಯಕ್ಷರೆ, ಇದನ್ನು ರೆಟ್ರಾಸ್ಪೆಕ್ಟಿವ್ ಎಂದು ವ್ಯಾಲಿಡಿಟಿ ಬರುವಂತೆ ಮಾಡಬೇಕು. ಇದನ್ನು ಮುಂದಕ್ಕೆ ಕೂಡಾ ಕಲೆಕ್ಟ್ ಮಾಡುವಂತೆ ಇರಬೇಕು. ಇದರಿಂದ ಸ್ಮೂತ್ ಮೇಯಿಂಟೇನ್ ಮಾಡಬೇಕಾಗುತ್ತದೆ. ರಿಸರ್ವ್ ಫುಂಡಿನಿಂದ ರಿಪೇರ್ಸ್ ಮಾಡುವುದಕ್ಕೆ ಅನುಕೂಲವಾಗುತ್ತದೆ. ಟೆಂಪಲ್ ಬಿಲ್ಡಿಂಗ್ ಮತ್ತು ಅನಿರೀಕ್ಷಿತವಾಗಿ ಬರುವ ಖರ್ಚು ವೆಚ್ಚಗಳನ್ನು ಪಾಗೂ ರಥೋತ್ಸವಗಳನ್ನು ನಡೆಸಲು ಅನುಕೂಲವಾಗುತ್ತದೆ. ಆದ್ದರಿಂದ ಮುಂದೆಯೂ ಇದನ್ನು ವಸೂಲು ಮಾಡುವುದಕ್ಕೆ ಅವಕಾಶವಿರಬೇಕು. ಈ ಒಂದು ಸಣ್ಣ ತಿದ್ದುಪಡಿಯನ್ನು ಅದಕ್ಕೋಸ್ಕರವಾಗಿ ತಂದಿದ್ದೇವೆ ಇದಕೆ ಈ ಮಾನ್ಯ ಸಭೆ ಒಪ್ಪಿಗೆ ಕೊಟ್ಟು ಪಾಸ್ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಚ್. ಗಂಗಾಧರನ್ (ಕೃಷ್ಣರಾಜ).—ಮಾನ್ಯ ಅಧ್ಯಕ್ಷರೆ, ನಮ್ಮ ಸರ್ಕಾರದವರು ತಂದಿರತಕ್ಕ ಮಸೂದೆಯಲ್ಲಿ ಯಾವ ವ್ಯಾಪಕವಾದ ಬದಲಾವಣೆಯು ಇಲ್ಲದೆ ಕೇವಲ ತುಕ್ಕಡಿ ಮಸೂದೆಯನ್ನು ತರುತ್ತಾರೆ ಇದನ್ನು ನೋಡಿದರೆ ನಮಗೆ ಒಂದು ಅರ್ಥವಾಗುವುದಿಲ್ಲ. ಇಷ್ಟು ಗಂಭೀರವಾದ ವಿಷಯಕ್ಕೆ ಕೇವಲ ಆತುರಾತುರವಾಗಿ ಒಂದೊಂದೇ ಅಂಶಗಳನ್ನು ತರುವುದನ್ನು ನೋಡಿದರೆ ಇದು ಈ ದೇಶದ ದೌರ್ಭಾಗ್ಯ. ಹಿಂದಿನ ಸರ್ಕಾರ ಒಳ್ಳೆಯ ಕೆಲಸಮಾಡಿದೆ. ಶೇಕಡ ೭ ರಷ್ಟು ಇರುವ ನಮ್ಮ ಮೈನಾರಿಟಿಸ್ ಬಾಂಧವರ ಧರ್ಮಸಂಸ್ಥೆ ಏನು ಇದೆ ಅದಕ್ಕೆ ಒಂದು ಕಾಯಿದೆ ಮಾಡಿ ಅದಕ್ಕೆ ಒಂದು ವಾಕ್ಸ್‌ಬೋರ್ಡ್ ರಚಿಸಿ ಅದಕ್ಕೆ ಸರ್ಕಾರದಿಂದ ೫ ಲಕ್ಷರೂಪಾಯಿ ಮುಂಜೂರು ಮಾಡಿಕೊಟ್ಟಿದೆ, ಜೊತೆಗೆ ಅವು ಸಾಲ ತೆಗೆದುಕೊಳ್ಳಲು ಅನುಕೂಲಮಾಡಿಕೊಟ್ಟಿದೆ. ಇದು ಒಂದು ಒಳ್ಳೆಯ ಕೆಲಸ ಆದರೆ ಈ ದೃಷ್ಟಿಯಿಂದ ಇದಕ್ಕೆ ಸರ್ವಧರ್ಮ ಸಮನ್ವಯದ ಪ್ರಕಾರ ರಕ್ಷಣೆ ಕೊಟ್ಟಿದ್ದಾರೆ. ಇನ್ನು ಕ್ರೈಸ್ತರಿಗೂ ಇದು ಅನ್ವಯಿ ಸುತ್ತದೆ. ಆದರೆ ನೂರಕ್ಕೆ ೮೫ ಭಾಗ ಹಿಂದುಗಳಿರುವ ಈ ದೇಶದಲ್ಲಿ ಹಿಂದುಗಳ ಸಂಸ್ಥೆಗಳು ನಾಶವಾಗುತ್ತಾ ಇರುವುದನ್ನು ನಾವು ಕಾಣುತ್ತಾ ಇದ್ದೇವೆಂದು ಬಹಳ ವಿಷಾದದಿಂದ ಹೇಳಬೇಕಾಗಿದೆ. ಹಿಂದೆ ಬ್ರಿಟೀಷರ ಕಾಲದಲ್ಲಿಯೂ ಅಂದರೆ ೧೮೧೦ ರಲ್ಲಿ ಈ ಸಮಸ್ಯೆ ಮೂಡಿ ಬಂತು. .....

ಅಂದಿನ ಸಮಾಜದಲ್ಲಿ ದೇಶದಲ್ಲಿ ಆಗತಕ್ಕಂಥ ಕಷ್ಟಗಳನ್ನು ಮನಗಂಡು ಧರ್ಮ ಸಂಸ್ಥೆಗಳನ್ನು ಮಹಾ ಜನತೆ ಕಟ್ಟಿದರು. ಧರ್ಮ ಸಂಸ್ಥೆಗಳು ಉಳಿಯಲಿ ಎಂದು ಬ್ರಿಟೀಷರು ೧೮೧೦ರಲ್ಲಿ ಆಗಿನ ಬಂಗಾಳ ಪ್ರಾಂತ್ಯದಲ್ಲಿ ರಿಲಿಜಿಯಸ್ ರೂಲ್ಸ್ ಎಂದು ಮಾಡಿದರು. ೧೮೧೭ರಲ್ಲಿ ಮದ್ರಾಸ್ ಪ್ರಾಂತ್ಯಕ್ಕೆ ಒಂದು ರೂಲ್ಸ್ ಮಾಡಿದರು ೧೮೨೭ರಲ್ಲಿ ಬಾಂಬೆ ಪ್ರಾಂತ್ಯಕ್ಕೆ ಒಂದು ರೂಲ್ಸನ್ನು ಮಾಡಿದರು. ಆದಾಗ್ಯೂ ಸಹ ಹಿಂದು ಧರ್ಮ ಸಂಸ್ಥೆಗಳನ್ನು ಸಂರಕ್ಷಣೆ ಮಾಡುವುದು ಕಷ್ಟವಾದಾಗ ಬ್ರಿಟೀಷ್ ಸರ್ಕಾರ ಇಡೀ ರಾಷ್ಟ್ರಕ್ಕೆ ಅನ್ವಯವಾಗುವಂತೆ ೧೮೬೦ರಲ್ಲಿ ರಿಲಿಜಿಯಸ್ ಎಂಡೋಮೆಂಟ್ ಆಕ್ಟ್ ಎಂದು ಮಾಡಿ

ದರು. ಇದಾದನಂತರವೂ ಇವುಗಳ ವ್ಯವಸ್ಥೆ ಸಮರ್ಪಕವಾಗಿ ಆಗದೆ ಹೋದ ಕಾರಣ, ದೇಶದಲ್ಲಿ ಚಳುವಳಿಗಳು ನಡೆಯುತ್ತಾ ಬಂದು ಹಳೆಯ ಮೈಸೂರು ಪ್ರಾಂತ್ಯಕ್ಕೆ ಒಂದು ಶಾಸನವನ್ನು ೧೯೨೭ರಲ್ಲಿ ಮಾಡಿದರು. ೧೯೨೭ರಲ್ಲಿ ಮಾಡಿದ ಶಾಸನದನ್ವಯ ಇಡೀ ಹಳೆಯ ಮೈಸೂರು ರಾಜ್ಯದಲ್ಲಿರತಕ್ಕ ಧರ್ಮಸಂಸ್ಥೆಗಳ ವ್ಯವಹಾರ ನಡೆಯುತ್ತಾ ಬಂದಿದೆ. ೧೯೫೫ರಲ್ಲಿ ಕರ್ನಾಟಕ ಏಕೀಕರಣ ಆದನಂತರ ಮದ್ರಾಸ್, ಬೊಂಬಾಯಿ, ಹೈದರಾಬಾದ್ ಮತ್ತು ಮಡಕೇರಿ ನಮಗೆ ಸೇರಿದ್ದರೂ ಕೂಡ ಹಿಂದೂ ಧರ್ಮ ದತ್ತಿಗಳಿಗೆ ಐದು ರೀತಿಯ ಶಾಸನ ಅನ್ವಯವಾಗುತ್ತಿದೆ. ಹಳೆಯ ಮೈಸೂರು ಪ್ರಾಂತ್ಯಕ್ಕೆ ಮಂಗಳೂರು ಜಿಲ್ಲೆ ಸೇರಿದೆಯಾದರೂ ತಮಿಳುನಾಡಿಗೆ ಸಂಬಂಧಪಟ್ಟ ಶಾಸನ ಅಲ್ಲಿಗೆ ಅನ್ವಯವಾಗುತ್ತಿದೆ. ಬಾಂಬೆ ಪಬ್ಲಿಕ್ ಟ್ರಸ್ಟ್ ಆಕ್ಟ್ ಬೊಂಬಾಯಿ ಕರ್ನಾಟಕ ಏರಿಯಾದಲ್ಲಿ ೧೯೫೦ನೇ ಇಸವಿಯಿಂದ ಅನ್ವಯವಾಗುತ್ತಿದೆ. ಇಂಥ ಸ್ಥಿತಿಯನ್ನು ನಾವು ನೋಡಿದಾಗ ಒಂದು ರಾಜ್ಯದಲ್ಲಿ ಐದು ರೀತಿಯ ಶಾಸನಗಳ ಮೂಲಕ ಆಡಳಿತ ಮಾಡುತ್ತಿರುವುದನ್ನು ನಾವು ಕಾಣುತ್ತಿದ್ದೇವೆ. ೧೯೨೭ರಲ್ಲಿ ಏನು ಈ ಸಂಬಂಧವಾಗಿ ಶಾಸನ ಬಂದಿದೆ ಅದು ಇಡೀ ರಾಜ್ಯಕ್ಕೆ ಸಮನ್ವಯವಾಗುತ್ತಿಲ್ಲ. ಇಷ್ಟಾದರೂ ಹಿಂದೂ ಸಂಸ್ಥೆಗಳನ್ನು ರಕ್ಷಣೆ ಮಾಡತಕ್ಕ ಮನೋಭಾವ ೧೯೪೭ರಿಂದ ಈಚೆಗೆ ಬಂದಂಥ ಸ್ವತಂತ್ರ್ಯ ಭಾರತದ ಸರ್ಕಾರಗಳಿಗೆ ಬರಲಿಲ್ಲ. ಇದು ಅತ್ಯಂತ ವಿಷಾದದ ಸಂಗತಿಯಾಗಿದೆ. ಇದನ್ನು ನಾವು ವಿಚಾರ ಮಾಡಬೇಕಾಗುತ್ತದೆ. ನಮ್ಮ ದೇಶವನ್ನಾಳಿದ ರಾಜ ಮಹಾರಾಜರುಗಳು ಹಿಂದು ಧರ್ಮ ಸಂಸ್ಥೆಗಳಿಗೆ ಅವುಗಳು ಮೇಲೆ ಬರುವುದಕ್ಕೋಸ್ಕರ ಕೋಟ್ಯಾಂತರ ರೂಪಾಯಿಗಳನ್ನು ಧಾನವಾಗಿ ಕೊಟ್ಟಿದ್ದಾರೆ. ಹಿಂದುಗಳೇ ಏಕೆ, ಮುಸಲ್ಮಾನ್ ಜನಾಂಗದ ರಾಜ ಆಡಳಿತಗಾರರು ಹೈದರಾಲಿ, ಟಿಪ್ಪುಸುಲ್ತಾನ್ ಮುಂತಾದವರು ಹಿಂದು ಧರ್ಮದ ಏಳಿಗೆಗೋಸ್ಕರ ಸಾಕಷ್ಟು ಬಳುವಳಿಗಳನ್ನು ಕೊಟ್ಟಿದ್ದಾರೆ. ಬ್ರಿಟೀಷರೂ ಸಹ ಎಲ್ಲಾ ಧರ್ಮಗಳಂತೆ ಹಿಂದೂ ಧರ್ಮವೂ ಉಳಿಯಲಿ ಎಂದು ಹಿಂದೂ ಸಂಸ್ಕೃತಿಗೆ ಬೆಂಬಲ ಕೊಟ್ಟುಕೊಂಡು ಬಂದಿದ್ದಾರೆ. ಕೊಡಗಿನಲ್ಲಿ ಧರ್ಮ ಸಂಸ್ಥೆಗೆ ಭೂಮಿಯನ್ನು ಯಾರಿಗೂ ಪರಭಾರೆ ಮಾಡತಕ್ಕ ಅಧಿಕಾರ ಇರಬಾರದು ಎನ್ನುವ ರೀತಿಯಲ್ಲಿ ಒಂದು ಶಾಸನ ಮಾಡಿದರು. ಸ್ವಾತಂತ್ರ್ಯ ಬಂದಮೇಲೆ ನಮ್ಮ ಧರ್ಮ ಸಂಸ್ಥೆಗಳು ನಶಿಸಿ ಹೋಗುತ್ತಿರುವುದನ್ನು ನಾವು ಕಾಣುತ್ತಿದ್ದೇವೆ. ಕೊಡಗಿನಲ್ಲಿ ಧರ್ಮ ಸಂಸ್ಥೆಗೆಂದು ಕೊಟ್ಟಿರತಕ್ಕ ಜಮೀನನ್ನು ಅಕ್ರಮಣ ಮಾಡಿದ್ದಾರೆ. ಇದೇ ಪರಿಸ್ಥಿತಿಯಲ್ಲಿ ಹಲವಾರು ಧರ್ಮಸಂಸ್ಥೆಗಳ ಜಮೀನು ಆಸ್ತಿಪಾಸ್ತಿಗಳು ಅಕ್ರಮಣವಾಗಿ ಹೋಗುತ್ತಿರುವುದನ್ನು ನಾವು ಇಂದು ಕಾಣುತ್ತಿದ್ದೇವೆ. ಪ್ರಮುಖವಾದ ಬೆಂಗಳೂರು ನಗರದಲ್ಲಿ ಮೆಜೆಸ್ಟಿಕ್ ಸರ್ಕಲ್ ಏರಿಯಾವಲ್ಲಿದ್ದ ಧರ್ಮ ಸಂಸ್ಥೆಯ ಆಸ್ತಿಯಲ್ಲಿ ಹಿಮಾಲಯ ಟಾಕೀಸನ್ನು ಕಟ್ಟಿದ್ದಾರೆ, ಮತ್ತು ಆ ಜಮೀನನ್ನು ಬೇರೆಯವರಿಗೆ ಪರಭಾರೆ ಮಾಡಿರುವುದನ್ನು ನಾವು ಕಾಣುತ್ತಿದ್ದೇವೆ. ರಾಜ್ಯಾಂಗದ ಪ್ರಕಾರ ಯಾವ ರಾಜ್ಯದಲ್ಲಿ ಸಮಾನತೆಯ ಬಗ್ಗೆ ಹೇಳುತ್ತಿದ್ದೇವೆಯೋ ಅವೇ ರಾಷ್ಟ್ರದಲ್ಲಿ, ರಾಜ್ಯದಲ್ಲಿ ಈ ಧರ್ಮದತ್ತಿಗಳ ಬಗ್ಗೆ ತಾರತಮ್ಯವನ್ನು ತೋರಿಸುತ್ತಿದ್ದೇವೆ. ಹಿಂದುಗಳು ಯಾರಾದರೂ ಸತ್ತರೆ ಹೂಳುವುದಕ್ಕೆ ಇದ್ದಂಥ ಭೂಮಿಯನ್ನು ಸರ್ಕಾರದವರು ವಶಮಾಡಿಕೊಂಡು ಬೇರೆ ಕೆಲಸಗಳಿಗೆ ಅವಕಾಶ ಮಾಡಿಕೊಡುತ್ತಿದ್ದಾರೆ. ಆದರೆ ಮುಸಲ್ಮಾನ್ ಬಾಂಧವರ ಸ್ಮಶಾನವಾಗಲೀ ಕ್ರೈಸ್ತರ ಸ್ಮಶಾನವಾಗಲೀ ಅಕ್ರಮಣ ಮಾಡಿಕೊಳ್ಳುವಂಥ ಅವಕಾಶವನ್ನು ನಾವು ಕಾಣುತ್ತಾ ಇಲ್ಲ. ಅವುಗಳು ಮಾತ್ರ ರಾಜ್ಯದ ನಗರಗಳ ಮಧ್ಯ ಭಾಗದಲ್ಲಿದ್ದರೂ ಸಹ ಹಾಗೆಯೇ ಉಳಿದಿವೆ. ಆದರೆ ಹಿಂದುಗಳ ಸ್ಮಶಾನದ ಭೂಮಿ ಮಾತ್ರ ಅಕ್ರಮಣಕ್ಕೆ ಗುರಿಯಾಗಿದೆ. ಕೆಲವು ಕಡೆಗಳಲ್ಲಿ ಇವು ಹೇಳುವುದಕ್ಕೆ ಹೆಸರೆ ಇಲ್ಲವಾಗಿದೆ. ಈ ಮಾತನ್ನು ಹೇಳುವಾಗ ನಾನು ಬೇರೆ ಮತೀಯ ದ್ವೇಷಿ ಎಂದು ಯಾರೂ ಭಾವನೆ ಮಾಡಬಾರದು. ಧಾರ್ಮಿಕ ವಿಚಾರಧಾರೆಯಲ್ಲಿ ತಾರತಮ್ಯ ಭಾವನೆ ಏಕೆ ತೋರಿಸುತ್ತೀರಿ ಅದರಲ್ಲಿಯೂ ಹಿಂದೂ ಧರ್ಮದ ಬಗ್ಗೆ ಇಂಥ ಭಾವನೆಯನ್ನು ತಳೆದಿರುವುದು ನಿಜವಾಗಿಯೂ ಶೋಚನೀಯ ಸಂಗತಿಯಾಗಿದೆ. ಈ ಸಂಬಂಧದಲ್ಲಿ ಅಲೀಘರ್ ವಿಶ್ವವಿದ್ಯಾನಿಲಯದ ಪ್ರೊಫೆಸರ್ ಒಬ್ಬರು 'ಸ್ಮಶಾನಗಳನ್ನು ಉಳಿಸಿಕೊಳ್ಳಬೇಕು ಎಂಬುದು ಕುರಾನಿನಲ್ಲಿ ಇಲ್ಲ ಎನ್ನುವ ಬಗ್ಗೆ ತಮ್ಮ ಗ್ರಂಥದಲ್ಲಿ ತಮ್ಮ ಪಿ.ಎಚ್.ಡಿ. ಗೋಸ್ಕರ ಬರೆದಿದ್ದಾರೆ. ಬೈಬಲ್‌ನಲ್ಲಿಯೂ ಇವುಗಳ ವಿಚಾರವಾಗಿ, ಸ್ಮಶಾನಗಳನ್ನು ಉಳಿಸಿಕೊಳ್ಳಬೇಕು ಎಂದು ಹೇಳಿದಂತಿಲ್ಲಾ ಆದರೆ ಹಿಂದೂಗಳ ಸ್ಮಶಾನಗಳ ಭೂಮಿಯನ್ನು ಆಕ್ರಮಣ ಮಾಡಿಕೊಂಡು, ಬೇರೆ ಕೆಲಸ ಕಾರ್ಯಗಳನ್ನು ಮಾಡುತ್ತಿದ್ದಾರೆ. ಮೈಸೂರು ನಗರದಲ್ಲಿ ಭಂಗಿಗಳಿಗೋಸ್ಕರ ಅವರು ಹೆಣವನ್ನು ಹೂಳುವುದಕ್ಕೆ ಸ್ಮಶಾನಕ್ಕೆ ಭೂಮಿಯನ್ನು ಕೊಟ್ಟರು. ಆದೇ ಭೂಮಿಯನ್ನು ಟ್ರಸ್ಟ್ ಬೋರ್ಡಿನವರು ಆಕ್ರಮಣ ಮಾಡಿಕೊಂಡರು. ಈಗ ಭಂಗಿಗಳಲ್ಲಿ ಯಾರಾದರೂ ಸತ್ತರೆ ಅದನ್ನು ಹೂಳುವುದಕ್ಕೆ ಎಲ್ಲಿಯೂ ಅವಕಾಶವಿಲ್ಲ. ಇಂಥ ಪರಿಸ್ಥಿತಿಯನ್ನು ನೋಡುತ್ತಿದ್ದೇವೆ. ಇದೇ ರೀತಿಯಲ್ಲಿ ಹಿಂದೂಗಳ

ದೇವಸ್ಥಾನಗಳು ರಕ್ಷಣೆ ಇಲ್ಲದೆ ಹಾಳಾಗಿ ಹೋಗುತ್ತಿವೆ. ದೇವಸ್ಥಾನಗಳಿಗೆ ಸೇರಿದ ಆಸ್ತಿಪಾಸ್ತಿಗಳನ್ನು ಬೇರೆಯವರು ಮುಟ್ಟುಗೋಲು ಮಾಡಿಕೊಂಡು ಉಪಯೋಗಿಸಿಕೊಳ್ಳುತ್ತಿದ್ದಾರೆ. ಇಂಥ ಸಂದರ್ಭದಲ್ಲಿ ಇಂಥ ಒಂದು ತುಕಡಿ ಶಾಸನವನ್ನು ತಂದು ಮುಜರಾಯಿ ಎಸ್ಟಾಬ್ಲಿಷ್‌ಮೆಂಟ್‌ಗೆ ಜನ ಹಣ ಕೊಡುತ್ತಿಲ್ಲ ಫಂಡ್‌ನ ಹಣವನ್ನು ಎಸ್ಟಾಬ್ಲಿಷ್‌ಮೆಂಟ್‌ಗೋಸ್ಕರ ಖರ್ಚು ಮಾಡುವುದಕ್ಕೆ ಅವಕಾಶ ಕೊಡಿ ಎಂದು ಕೇಳುತ್ತಿದ್ದಾರೆ. ಧರ್ಮ ಸಂಸ್ಥೆಗಳನ್ನು ಉಳಿಸಬೇಕು ಎನ್ನುವ ದೃಷ್ಟಿಯಿಂದ ಈ ಮಸೂದೆಯನ್ನು ತಂದಿದ್ದಾರೆಂದು ನಾನು ಭಾವಿಸುವುದಿಲ್ಲ. ಯಾವುದೇ ಪಕ್ಷಕ್ಕೆ ಆಗಲೀ, ಸರ್ಕಾರಕ್ಕೆ ಆಗಲೀ ಎದೆಗಾರಿಕೆ ಇದ್ದರೆ ಹೇಳಲಿ, ಹಿಂದೂ ಮಂದಿರಗಳನ್ನು, ಧರ್ಮ ಸಂಸ್ಥೆಗಳನ್ನು ಆಳಿಸಿಬಿಡುತ್ತೇವೆ ಎಂದು. ಇಡೀ ಕರ್ನಾಟಕ ರಾಜ್ಯಕ್ಕೆ ರಾಜ್ಯದ ಐದು ಪ್ರಾಂತ್ಯಗಳಲ್ಲಿ ಸಮಗ್ರವಾಗಿ ಅನ್ವಯವಾಗುವಂಥ ಶಾಸನವನ್ನು ತರುವಂಥ ಪ್ರಯತ್ನವನ್ನು ಇದುವರೆಗೂ ಯಾರೂ ಮಾಡಲಿಲ್ಲ. ಕಳೆದ ೨೫ ವರ್ಷಗಳಿಂದಲೂ ಇದರ ಬಗ್ಗೆ ಯಾವ ಸರ್ಕಾರವೂ ಏನನ್ನೂ ಮಾಡಲಿಲ್ಲ. ೧೯೬೦ನೇ ಇಸವಿಯಲ್ಲಿ ರಾಜ್ಯ ಸರ್ಕಾರ ರಿಲಿಜಿಯಸ್ ಎಂಡೊ ಮೆಂಟ್ ಬಿಲ್ಲನ್ನು ತಂದು ಅದು ಸಂಪೂರ್ಣ ಚರ್ಚೆಯಾಗದೆ ಯಾವ ತೀರ್ಮಾನವೂ ಆಗಲಿಲ್ಲ. ಕಳೆದ ಅಧಿವೇಶನದಲ್ಲಿಯೂ ಸಹ ಇದರ ಬಗ್ಗೆ ಒಂದು ಮಸೂದೆ ಬಂದು ಅದು ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಹೋಯಿತು. ಮುಂದೆ ಅದು ಏನಾಯಿತೋ ತಿಳಿಯಲಿಲ್ಲ. ಏಕೆ ಹಿಂದೂ ಧರ್ಮದ ಬಗ್ಗೆ ಇಂಥ ತಿರಸ್ಕಾರ ಎಂದು ನನಗರ್ಥವಾಗಲಿಲ್ಲ. ಇಂಥ ಸಣ್ಣ ಸಣ್ಣ ವಿಷಯಗಳನ್ನು ಮಾತ್ರ ತೆಗೆದುಕೊಂಡು ಅದರ ಬಗ್ಗೆ ಒಂದು ಸಣ್ಣ ಅಮೆಂಡ್‌ಮೆಂಟ್ ತಂದು ಜನತೆಯ ಕಣ್ಣಿಗೆ ಮಣ್ಣೆರೆಚುವ ಕೆಲಸವನ್ನು ಹಿಂದಿನ ಸರ್ಕಾರಗಳು ಮತ್ತು ಇಂದಿನ ಸರ್ಕಾರದವರು ಮಾಡುತ್ತಿದ್ದಾರೆ ಇದು ನಿಜವಾಗಿಯೂ ಕೂಡ ಶೋಚನೀಯ ಸಂಗತಿ. ಈ ದೃಷ್ಟಿಯಿಂದ ಮಾನ್ಯ ಮಂತ್ರಿಗಳು ಈ ಮಸೂದೆಯನ್ನು ಏನು ತಂದಿದ್ದಾರೆ ಅದು ನ್ಯಾಯಾಲಯದ ತೀರ್ಪನ್ನು ತಳ್ಳಿ ಹಾಕುವುದಕ್ಕೆ ಎಂದು ಹೇಳುತ್ತಿದ್ದಾರೆ. ಇದರಿಂದ ಯಾವ ಒಂದು ಮಹತ್‌ಸಾಧನೆ ಮಾಡುತ್ತಾರೋ ಅದು ನನಗರ್ಥವಾಗುವುದಿಲ್ಲ. ಈ ದೃಷ್ಟಿಯಿಂದ ನಮ್ಮ ಹಿಂದೂ ಸಂಸ್ಕೃತಿ ಉಳಿಯುವಂತಹ ನಮ್ಮ ಹಿಂದೂ ಧರ್ಮ ಉಳಿಯುವಂತಹ ಒಂದು ಸಮಗ್ರ ವಾದಂಥ ಕಾನೂನನ್ನು ಜಾರಿಗೆ ತರಬೇಕೆಂದು ಸರ್ಕಾರದಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ನಮ್ಮ ಹಿಂದೂ ಧರ್ಮ ಉಳಿಯಬೇಕಾದರೆ, ಅದು ಇನ್ನೊಂದು ಧರ್ಮವನ್ನು ದ್ವೇಷ ಮಾಡಬಾರದು. ನಮ್ಮ ಹಿಂದೂ ಧರ್ಮದ ಮೂಲ ಭಾರತ ದೇಶದಲ್ಲಿದೆ. ಯಾವ ಧರ್ಮ ಇನ್ನೊಂದು ಧರ್ಮವನ್ನು ಭೇದ ಮಾಡುತ್ತದೋ ಅದು ಒಳ್ಳೆಯ ಧರ್ಮವಲ್ಲ. ಈ ಮಾತನ್ನು ನಾವು ನಮ್ಮ ಭಾರತ ಚರಿತ್ರೆಯಿಂದ ತಿಳಿದುಕೊಳ್ಳಬಹುದಾಗಿದೆ. ನಮ್ಮ ಹಿಂದೂ ಸಿದ್ಧಾಂತ ನಮ್ಮ ಹಿಂದೂ ಸಂಸ್ಕೃತಿಯಲ್ಲಿ ಒಬ್ಬರನ್ನೊಬ್ಬರು ಪ್ರೀತಿ ಮಾಡುವುದರ ಮೂಲಕ ನಮ್ಮ ಶ್ರೇಯಸ್ಸನ್ನು ಸಂಪಾದನೆ ಮಾಡಬೇಕೆಂದು ಹೇಳಿದೆ. ಆದಕಾರಣ ಇಂತಹ ಒಂದು ಪವಿತ್ರ ಭಾವನೆ ಇರುವಂತಹ ನಮ್ಮ ಹಿಂದೂ ಧರ್ಮವನ್ನು ನಾವು ಬೆಳೆಸಿಕೊಂಡು ಹೋಗಬೇಕಾಗಿದೆ. ಇವೊತ್ತು ನಮ್ಮ ಕರ್ನಾಟಕ ರಾಜ್ಯದಲ್ಲಿ ಧರ್ಮಸಂಸ್ಥೆಗಳು ಬೇಕಾದಷ್ಟು ಇವೆ. ಸಾರ್ವಜನಿಕರು ಇಲ್ಲಿ ಕೋಟ್ಯಾಂತರ ರೂಪಾಯಿಗಳಷ್ಟು ಬಂಡವಾಳ ಹಾಕಿದ್ದಾರೆ. ಜನರು ತಮ್ಮ ಬೆವರಿನಿಂದ ಸಂಪಾದನೆ ಮಾಡಿದ ಹಣದಲ್ಲಿ ಒಂದು ಭಾಗವನ್ನು ಈ ಧರ್ಮಸಂಸ್ಥೆಗಳಿಗೆ ವಿನಿಯೋಗ ಮಾಡಿದ್ದಾರೆ ಈ ರೀತಿ ಜನರಿಂದ ವಸೂಲಿಯಾದ ಕೋಟ್ಯಾಂತರ ರೂಪಾಯಿಗಳನ್ನು ಸಂರಕ್ಷಣೆ ಮಾಡಲು ಒಂದು ಸಮಗ್ರವಾದಂಥ ಶಾಸನ ಈ ನಮ್ಮ ದೇಶದಲ್ಲಿ ಇಲ್ಲ ಅಂದರೆ ನಮ್ಮ ಈ ದೇಶದಲ್ಲಿ ಸರ್ಕಾರ ಎಂಬುದು ಏನಾದರೂ ಇದೆಯೇ ಎಂದು ನಾನು ಕೇಳುತ್ತೇನೆ ? ಈ ದೃಷ್ಟಿಯಿಂದಲಾದರೂ, ಸಹ ನಮ್ಮ ಸರ್ಕಾರದವರು ಇಂತಹ ಸಣ್ಣ ಸಣ್ಣ ಮಸೂದೆಗಳನ್ನು ತರುವುದಕ್ಕೆ ಬದಲು ನಮ್ಮ ಹಿಂದೂ ಸಂಸ್ಕೃತಿ, ಹಿಂದೂ ಧರ್ಮಸಂಸ್ಥೆಗಳ ಸಂರಕ್ಷಣೆಗಾಗಿ ಇಡೀ ಕರ್ನಾಟಕ ರಾಜ್ಯಕ್ಕೆ ಅನ್ವಯವಾಗುವಂತಹ ಒಂದು ಸಮಗ್ರ ಕಾನೂನನ್ನು ಸರ್ಕಾರದವರು ತರಬೇಕೆಂದು ಹೇಳುತ್ತೇನೆ. ಇಂತಹ ಒಂದು ತುಕಡಿ ಶಾಸನ ತಂದು ಇದು ತುಕಡಿ ಸರ್ಕಾರವಾಗುವುದು ಬೇಡ. ಈ ಕಾರಣದಿಂದ ಈಗ ತಂದಿರುವ ಮಸೂದೆಯನ್ನು ಹಿಂದಕ್ಕೆ ತೆಗೆದುಕೊಳ್ಳಬೇಕೆಂದು ತಮ್ಮ ಮೂಲಕ ಮಾನ್ಯ ಮಂತ್ರಿಗಳಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ.— ನಾನು ಈ ಮಸೂದೆಯನ್ನು ಮಂಡಿಸುವಾಗ ಒಂದು ವಿಷಯವನ್ನು ಹೇಳಲಿಲ್ಲ. ಏನೆಂದರೆ ಈ ಮೊದಲು ಆರ್ಡರ್ ಎಕ್ಸಿಕ್ಯೂಟ್ ಮಾಡಲು ೬ ತಿಂಗಳ ಅವಕಾಶವಿತ್ತು. ಈಗ ಅದನ್ನು ತೆಗೆದುಹಾಕಿದ್ದೇವೆ. ಆಮೇಲೆ "Muzrai Officer one of the defendants", ಎಂದು ಮೊದಲು ಇತ್ತು. ಈಗ ಅದನ್ನು "Commissioner for Endowments and Muzrai Officer as defendants" ಎಂದು ತಿದ್ದುಪಡಿ ಮಾಡಿದ್ದೇವೆ. ಮಾನ್ಯ ಸದಸ್ಯರು ಪ್ರಸಾ ಪ ಮಾಡಿದ ವಿಷಯಗಳಿಗೆ ನಾನು ಕೊನೆಯಲ್ಲಿ ಉತ್ತರ ಕೊಡುತ್ತೇನೆ.

ಶ್ರೀ ಜಿ. ಎಸ್. ಶಿವನಂಜಪ್ಪ (ಬೆಳ್ಳಾವಿ).--ಮಾನ್ಯ ಅಧ್ಯಕ್ಷರೇ, ಮಾನ್ಯ ಗಂಗಾಧರನ್ ಅವರು ಹೇಳಿದ ವಿಷಯಗಳನ್ನೆಲ್ಲಾ ಸಮರ್ಥನೆ ಮಾಡುತ್ತಾ ಈಗ ಇಲ್ಲಿ ಮಂಡಿಸಿರುವ ಕಾನೂನು ಸಮಗ್ರವಾಗಿಲ್ಲ, ಸಮಗ್ರವಾಗಿರತಕ್ಕಂಥ ಒಂದು ಕಾನೂನನ್ನು ತರುವುದು ಅವಶ್ಯಕವಿದೆ ಎಂದು ಹೇಳುತ್ತೇನೆ. ಸಮಗ್ರವಾದ ಕಾನೂನು ಇಲ್ಲದ ಕಾರಣ ಅನೇಕ ಹಿಂದೂಮತಗಳ, ದೇವಸ್ಥಾನಗಳ ಆಸ್ತಿಗಳು ಪೋಲಾಗುತ್ತಿದೆ. ೧೯೨೭ ರಲ್ಲಿ ಆಗಿನ ಮಹಾರಾಜರು ಮಾಡಿದ ಆರ್ಡರ್ ಪ್ರಕಾರ ೫ ಪರ್ಸೆಂಟ್ ಹತ್ತು ಪರ್ಸೆಂಟ್ ರಿಜರ್ವ್ ಫಂಡ್ ವಸೂಲಿ ಮಾಡಲು ಸರ್ಕಾರಕ್ಕೆ ಅಧಿಕಾರವಿಲ್ಲವೆಂದು ಹೈಕೋರ್ಟ್‌ನವರು ತೀರ್ಮಾನ ಕೊಟ್ಟಿದ್ದರಿಂದ ಈ ಕಾನೂನನ್ನು ತರುತ್ತಿದ್ದೇವೆಂದು ಹೇಳಿದರು. ಅಂದರೆ ಆ ಕಾಲದಿಂದ ಹಿಡಿದು ಇಲ್ಲಿಯವರೆಗೆ ಖರ್ಚು ಮಾಡಿದ ಹಣ ಏನಿದೆ, ಅದರ ಬಗ್ಗೆ ತಾವು ಏನಾದರು ಯೋಚನೆ ಮಾಡಿದ್ದೀರಾ ? ಈಗ ಸರ್ಕಾರದವರು ಇದಕೆ ಸಂಬಂಧಪಟ್ಟಂತೆ ಕೆಲವು ಕಾನೂನುಗಳನ್ನು ತಂದಿದ್ದಾರೆ. The insertion of Clause 12 A says:—

> "12 A. MUZRAI ESTABLISHMENT FUND --(1) The Government, may by order, establish for the State a fund called the Muzrai Establishment Fund. The Fund shall be operated and maintained by such officer and in such manner as the Government may, from time to time, direct....."

Here, they want to concentrate the Fund with a particular person or officer. I request the Hon'ble Minister to look to Section 6 of the Muzrai Act where the Government has got powers to appoint a Committee of Dharmadarshis. The Government may appoint a Dharmadarshi to manage the affairs of one or more Muzrai institutions. So, why not these Dharmadarshis be entrusted with the work of looking after the funds. This is my first objection.

Secondly, they have created only 3 kinds of funds Under Section 6 the Goverument can appoint a Dharmadarshi. Under Section 7, in addition to the Committee of Dharmadarshis the Government has got power to appoint another Committee. Suppose the other Committee raises a fund for the betterment of the social welfare or the community itself. Where is the provision for it ? The previous Government had some idea before it. They thought that better work could be extracted by these people. ಈಗ ಯಾರಾದರು ಧರ್ಮವಾಗಿ ಹಣ ಕೊಡಬೇಕೆಂದು ಇಷ್ಟ ಪಟ್ಟಾಗ, ಆ ಹಣವನ್ನು ಯಾವ ಫಂಡ್‌ಗೆ ಹಾಕಿಕೊಳ್ಳುತ್ತೀರಿ ? ಅದಕ್ಕೆ ಏನಾದರು ಒಂದು ಪ್ರಾವಿಜನ್ ಮಾಡಿದ್ದೀರಾ ? ಈಗ ಯಾರು ಹಣವನ್ನು ಧರ್ಮಕ್ಕಾಗಿ ಕಲೆಕ್ಟ್ ಮಾಡುತ್ತಾರೋ, ಆ ಹಣವನ್ನು ಖರ್ಚು ಮಾಡುವ ವಿಧಾನದ ಬಗ್ಗೆ ಈ ಆಕ್ಟ್‌ನಲ್ಲಿಯೇ ಮೆನ್‌ಷನ್ ಮಾಡಬೇಕಾಗುತ್ತದೆ. ಈಗ ಜಾತ್ರೆಗಾಗಿ ಮತ್ತು ರಿಪೇರಿಗಾಗಿ ಹಣ ಖರ್ಚು ಮಾಡುವುದನ್ನು ಬಿಟ್ಟರೆ ಬೇರೆ ಯಾವ ಪರ್‌ಪಸ್‌ಗೂ ಹಣ ಖರ್ಚು ಮಾಡಲು ಅವಕಾಶವಿಲ್ಲ. ಈಗ ತಾವು ಈ ಕಾನೂನಿನ ಪ್ರಕಾರ ಬೇರೆ ಕಮಿಟಿಗಳನ್ನು ನೇಮಕ ಮಾಡಿದಾಗ ಆ ಕಮಿಟಿಯವರು ಸಾರ್ವಜನಿಕರಿಂದ ಹಣವನ್ನು ವಸೂಲಿ ಮಾಡಿದರೆ, ಆ ಹಣವನ್ನು ಏನು ಮಾಡುತ್ತೀರಿ? ಅದನ್ನು ಯಾವ ಪರ್‌ಪಸ್‌ಗೋಸ್ಕರ ಖರ್ಚು ಮಾಡುತ್ತೀರೆಂಬುದನ್ನು ಇಲ್ಲಿ ತೋರಿಸಿಲ್ಲ. ಇದನ್ನು ಇಲ್ಲಿ ತೋರಿಸುವುದು ಒಳ್ಳೆಯದು. ಇದಕ್ಕೆ ನನ್ನ ಸಲಹೆ ಏನೆಂದರೆ, ಇಲ್ಲಿರುವಂತಹ ಸೆಕ್ಷನ್ ೧೨(ಎ)ಗೆ ಸೇರಿದಂತೆ, ಎರಡನೇ ಪ್ಯಾರಾದಲ್ಲಿ ಸಬ್-ಕ್ಲಾಸ್ (ಡಿ) ಎಂದು ಒಂದು ಕ್ಲಾಸನ್ನು ತೆಗೆದುಕೊಂಡುಬನ್ನಿ. ಈಗ ತಾವು ಇನ್ನೊಂದು ಕಮಿಟಿಯನ್ನು ನೇಮಕ ಮಾಡುವುದರಿಂದ, ಆ ಕಮಿಟಿಯವರು ಯಾವುದೇ ರೀತಿಯಿಂದ ಹಣವನ್ನು ದಾನದ ಮೂಲಕ ಜನರಿಂದ ವಸೂಲಿ ಮಾಡಿದರೆ, ಅದನ್ನು ಉಪಯೋಗ ಮಾಡುವ ವಿಧಾನವನ್ನು ಇಲ್ಲಿ ತೋರಿಸಬೇಕು. ಈಗ ಮುಜರಾಯಿ ಫಂಡ್‌ನಲ್ಲಿರುವ

ಹಣ ದೇವಸ್ಥಾನದ ರಿಪೇರಿ ಮತ್ತು ಪೂಜಾರಿಗೆ ತಿಂಗಳಿಗೆ ೨೫ ರೂ.ಗಳನ್ನು ಕೊಡುವುದನ್ನು ಬಿಟ್ಟರೆ ಬೇರೆ ಯಾವ ಕೆಲಸವೂ ಆಗುತ್ತಿಲ್ಲ. ಮೈಸೂರು ಮುಜರಾಯಿ ಕಾನೂನನ್ನು ಓದಿದರೆ ಜನರಿಂದ ಬಂದ ಹಣವನ್ನು ಖರ್ಚು ಮಾಡಲು ಬೇಕಾದಷ್ಟು ಅವಕಾಶಗಳಿವೆ. ಸ್ಕೂಲನ್ನು ನಡೆಸಬಹುದು, ಧರ್ಮಛತ್ರಗಳನ್ನು ಕಟ್ಟಿಸಬಹುದಾಗಿದೆ ; ಆದ್ದರಿಂದ ಈ ರೀತಿಯಲ್ಲಿ ನಾನಾ ರೀತಿಯಿಂದ ಒಳ್ಳೆಯ ಕೆಲಸಗಳನ್ನು ಮಾಡುವುದಕ್ಕೆ ಅವಕಾಶವಾಗುವಂತಹ ರೀತಿಯಲ್ಲಿ ಒಂದು ಸಮಗ್ರವಾಗಿರತಕ್ಕಂಥ ಕಾನೂನನ್ನು ತರಬೇಕೆಂದು ಹೇಳುತ್ತೇನೆ. ಈಗ ಮಾನ್ಯ ಮಂತ್ರಿಗಳು ತಂದಿರುವಂತಹ ಕಾನೂನಿನಿಂದ ಯಾವುದೇ ರೀತಿಯಿಂದ ಸರ್ಕಾರಕ್ಕೆ ಸಹಾಯವಾಗುವುದಿಲ್ಲ. ಏಕೆಂದರೆ ಇಲ್ಲಿ ಖರ್ಚು ಮಾಡುವ ದುಡ್ಡಿನ ಬಗ್ಗೆಯಾಗಲೀ ಅಥವಾ ಕಲೆಕ್ಟ್ ಮಾಡುವ ದುಡ್ಡಿನ ಬಗ್ಗೆಯಾಗಲೀ ಏನನ್ನೂ ಹೇಳಿಲ್ಲ. ಇದರಿಂದ ಮುಂದೆ ಎಲ್ಲರೂ ಸೂಟ್ ಫೈಲ್ ಮಾಡುತ್ತಾರೆ. ಇದಕ್ಕೆ ಅವಕಾಶ ಕೊಡಬಾರದು. ಈಗ ಏನು ಹಣ ಖರ್ಚು ಮಾಡಲಾಗಿದೆ ; ಅದನ್ನು ರೆಗ್ಯುಲರೈಜ್ ಮಾಡಿದ್ದೀರಿ. ಆದರೆ ಇನ್ನು ಮುಂದೆ ಏನು ಮಾಡಬೇಕೆಂದು ಇಲ್ಲಿ ಹೇಳಿಲ್ಲ. ಕಾನ್‌ಸೆಂಟ್ರೇಷನ್ ಆಫ್ ಪವರ್ಸ್ ಇರಬಾರದು. ಈಗ ಯಾರೋ ದಾನಿಗಳು ದೇವಸ್ಥಾನಕ್ಕೆ ದುಡ್ಡು ಕೊಡುತ್ತಾರೆ. ಆ ಹಣವನ್ನು ಏನು ಮಾಡಬೇಕೆಂಬುದಕ್ಕೆ ಇಲ್ಲಿ ಪ್ರಾವಿಜನ್ ಇಲ್ಲ. ಇದಕ್ಕೆಲ್ಲಾ ನಾವು ಸೂಕ್ತವಾದ ತಿದ್ದುಪಡಿಗಳನ್ನು ತರಬೇಕಾಗುತ್ತದೆ. ದಾನಿಗಳಿಂದ ಬಂದ ಹಣವನ್ನು ಯಾವ ಯಾವ ಬಾಬುಗಳಿಗೆ ಉಪಯೋಗ ಮಾಡಬೇಕೆಂಬುದನ್ನು ಇಲ್ಲಿ ನಾವು ಆಳವಡಿಸಿದ್ದೇ ಆದರೆ ನಿಜವಾಗಿಯೂ ಒಳ್ಳೆಯ ಸರ್ವೀಸ್ ಮಾಡಬಹುದು. ಜೊತೆಗೆ ಒಂದು ಒಳ್ಳೆಯ ಸಂಪ್ರದಾಯವನ್ನು ಎಸ್ಟಾಬ್ಲಿಷ್ ಮಾಡಬಹುದೆಂದು ಹೇಳಿ ನಾನು ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಡಿ. ಜಯದೇವರಾಜ ಅರಸ್ (ಚಾಮುಂಡೇಶ್ವರಿ).—ಮಾನ್ಯ ಅಧ್ಯಕ್ಷರೇ, ಈಗ ಮಾನ್ಯ ಮಂತ್ರಿಗಳು ಈ ಸಭೆಯ ಮುಂದೆ ಮಂಡಿಸಿರುವಂತಹ ಬಿಲ್‌ನಲ್ಲಿ ವಸೂಲಿಯಾದ ಹಣದ ಬಗ್ಗೆ ಹೇಳಿದ್ದಾರೆಯೇ ಹೊರತು, ಹಣವನ್ನು ಯಾರಿಂದ ವಸೂಲಿ ಮಾಡುವುದು ಎಂಬ ಬಗ್ಗೆ ಎಲ್ಲಿಯೂ ಸಹ ಹೇಳಿಲ್ಲ.

SRI C. M. ARMUGHAM.—Sir, let us take up this Bill tomorrow as it is already 6 'O' Clock.

ಶ್ರೀ ಡಿ. ಜಯದೇವರಾಜ ಅರಸ್,—ಹಾಗಿದ್ದರೆ ನಾನು ನಾಳೆ ದಿವಸ ಮಾತನಾಡುತ್ತೇನೆ.

6-00 P.M.

MR. SPEAKER.—Before adjourning the House I wish to bring to your notice that the Business Advisory Committee which met today have decided upon the following programme of business :

Date	*Business*
26-2-1980 } **27-2-1980** }	**Legislative Business**
	(1) The Mysore Religious and Charitable Institutions (Karnataka Amendment) Bill, 1979.
	(2) The Karnataka Land Reforms (Amendment) Bill, 1980.
	(3) The Karnataka Co-operative Societies (Amendment) Bill, 1980.
	(4) The Karnataka Essential Service Maintenance Bill, 1979.
	Official Resolution regarding ratification of the Constitution (45th Amendment) Bill, 1980.